## ॥ ಶ್ರೀವಿಜಯದಾಸರ ವಿರಚಿತ ಪಂಚರತ್ನ ಸುಳಾದಿಗಳು ॥

HOME PAGE

॥ ಶ್ರೀ ಮಧ್ವಾಂತರ್ಗತ ಶ್ರೀಲಕ್ಷ್ಮೀನರಸಿಂಹಾಯ ನಮಃ ॥

### ॥ ಶ್ರೀಕಪಿಲದೇವರ ಸುಳಾದಿ ॥

॥ ರಾಗ ತೋಡಿ ಧ್ರುವತಾಳ ॥

ಸಿದ್ದಿದಾಯಕ ಶಿಷ್ಯಜನ ಪರಿಪಾಲ ಪರಮಾ ।
ಶುದ್ಧಾತ್ಮ ಸುಗುಣಸಾಂದ್ರ ಸುಖವಾರಿಧಿ ।
ನಿದ್ರಾರಹಿತ ನಿದ್ರಾರಮಣ ನಿರ್ವಿಕಾರ ।
ಚಿದ್ದೇಹ ಸರ್ವಕಾಲ ಸುಂದರಸಾರ ।
ಪದ್ಮ ಸಂಭವ ಬಲಿ ಪ್ರಕ್ಷಾಲಿತಪಾದಮಹಾ ।
ಹೃದ್ರೋಗನಾಶ ವೈಕುಂಠವಾಸ ।
ವಿದ್ಯಾತೀತ ವಿಶ್ವನಾಟಕ ನಾರಾಯಣ ।
ವಿದ್ಯ ಉದ್ಧಾರಕ ಉದಧಿ ಸದನಾ ।
ಸಿದ್ಧಾದಿ ವಿನುತ ಸಂತತ ಪಾತಾಳವಾಸಿ ।
ಬುದ್ಧಿ ವಿಶಾಲ ಮಹಿಮ ಪಾಪಹಾರಿ ।
ಖದ್ಯೋತ ವರ್ಣ ಸಕಲ ವ್ಯಾಪ್ತ ಆಕಾಶ ಅಮಿತ ।
ಬದ್ಧ ವಿಚ್ಛೇದ ನಾನಾ ರೂಪಾತ್ಮಕಾ ।
ಅದ್ವೈತ ಕಾಯಾ ಮಾಯಾರಮಣ ರಾಜೀವನೇತ್ರಾ ।
ಅದ್ವಯ ಅನಾಧಿ ಪುರುಷ ಚಿತ್ರ ।
ಕರ್ದಮ ಮುನಿಸೂನು ವಿಜಯ ವಿಠ್ಠಲ ಕಪಿಲ ।
ನಿರ್ದೋಷ ಕರುಣಾಬ್ಧಿ ಸರ್ವರಾಧಾರಿ ॥1॥

॥ ಮಟ್ಟ ತಾಳ ॥

ಆದಿ ಮನ್ವಂತರದಿ ಜನಿಸಿದ ಮಹದ್ದೈವ ।
ಆದಿ ಪೊರಬೊಮ್ಮ ಬೊಮ್ಮನಯ್ಯಾ ಜೀಯಾ ।
ಸಾಧು ಜನರ ಪ್ರೀಯಾ ಸಂತತ ಮುನಿ ತಿಲಕಾ ।
ಬೋಧ ಶರೀರ ಭಕುತರ ಮನೋಹರ ಹರಿ ।
ಮಾಧವ ಸಿರಿ ವಿಜಯ ವಿಠ್ಠಲ ವಿಮಲೇಶಾ ।
ಮೋದ ಮತಿಯ ಕೊಡುವ ಕಪಿಲಭಗವನ್ಮೂರ್ತಿ ॥ 2॥

॥ ತ್ರಿವಿಡ ತಾಳ ॥

ಘನ ಮಹಿಮ ಗೌಣಾಂಡದೊಳಗೆ ಲೀಲೆಯಿಂದ ।
ಜನಿಸಿ ಮೆರೆದೆ ಬಿಂದು ಸರೋವರದಲ್ಲಿ ।
ಮಿನುಗುವ ದ್ವಯಹಸ್ತ ಅಪ್ರಾಕೃತಕಾಯ ।
ಇನನಂತೆ ಒಪ್ಪುವ ಶಿರೊರುಹವೊ ।
ಕನಕ ಪುತ್ಥಳಿಯಂತೆ ಕಾಂತಿ ತ್ರಿಭುವನಕ್ಕೆ ।
ಅನವರತ ತುಂಬಿ ಸೂಸುತಲಿದಕೋ ।
ಜನನಿ ದೇವಹೂತಿಗೆ ಉಪದೇಶವನು ಮಾಡಿ ।
ಗುಣ ಮೊದಲಾದ ತತ್ವವ ತಿಳಿಸಿದೆ ।
ತನುವಿನೊಳಗೆ ನೀನೆ ತಿಳಿದು ತಿಳಿದೆ ನಿತ್ಯ ।
ಜನರನ್ನು ಪಾಲಿಸುವ ಕಪಿಲಾಖ್ಯನೆ ।
ಅನುದಿನ ನಿನ್ನ ಧ್ಯಾನವಮಾಡಿ ಮಣಿಯಿಂದ ।

ಎಣಿಸುವ ಸುಜನಕ್ಕೆ ಜ್ಞಾನ ಕೊಡುವೆ ।
ಎಣೆಗಾಣೆ ನಿನ್ನಾಲೋಚನದ ಶಕ್ತಿಗೆ ಸಗರ ।
ಜನಪ ನಂದನರನ್ನು ಭಂಗಿಸಿದೆ ।
ಅನುಮಾನವಿದಕಿಲ್ಲ ನಿನ್ನ ನಂಬಿದ ಮೂಢ ।
ಮನುಜನಿಗೆ ಮಹ ಪದವಿ ಬರುವದಯ್ಯ ।
ಮುನಿಕುಲೋತ್ತಮ ಕಪಿಲ ವಿಜಯ ವಿಠ್ಠಲರೇಯ ।
ಎನಗೆ ಯೋಗ ಮಾರ್ಗವನು ತೋರು ತವಕದಿಂದ ॥ 3 ॥

॥ ಅಟ್ಟತಾಳ ॥

ಕಪಿಲ ಕಪಿಲಯೆಂದು ಪ್ರಾತಃಕಾಲದಲೆದ್ದು ।
ಸಪುತ ಸಾರಿಗೆಲಿ ನುಡಿದ ಮಾನವನಿಗೆ ।
ಅಪಜಯ ಮೊದಲಾದ ಕ್ಲೇಶಗಳೊಂದಿಲ್ಲಾ ।
ಅಪರಿಮಿತ ಸೌಖ್ಯ ಅವನ ಕುಲಕೋಟಿಗೆ ।
ಗುಪುತ ನಾವವಿದು ಮನದೊಳಗಿಡುವದು ।
ಕಪಟ ಜೀವರು ಈತನು ಒಬ್ಬ ಋಷಿಯೆಂದು ।
ತಪಿಸುವರು ಕಾಣೊ ನಿತ್ಯ ನರಕದಲ್ಲಿ ।
ಕೃಪಣ ವತ್ಸಲ ನಮ್ಮ ವಿಜಯ ವಿಠ್ಠಲರೇಯ ।
ಕಪಿಲಾವತಾರ ಬಲ್ಲವಗೆ ಬಲು ಸುಲಭ ॥ 4 ॥

॥ ಆದಿತಾಳ ॥

ಬಲ ಹಸ್ತದಲ್ಲಿ ಯಜ್ಞಶಾಲೆಯಲ್ಲಿ ಕಂ ।
ಗಳ ಕಪ್ಪಿನಲ್ಲಿ ಹೃದಯ ಸ್ಥಾನ ನಾಭಿಯಲ್ಲಿ ।
ಜಲಧಿ ಗಂಗಾ ಸಂಗಮದಲ್ಲಿ ಗಮನದಲ್ಲಿ ।
ತುಲಸಿ ಪತ್ರದಲ್ಲಿ ತುರಗ ತುರುವಿನಲ್ಲಿ ।
ಮಲಗುವ ಮನೆಯಲ್ಲಿ ನೈವೇದ್ಯ ಸಮಯದಲ್ಲಿ ।
ಬಲು ಕರ್ಮ ಬಂಧಗಳು ಮೋಚಕವಾಗುವಲ್ಲಿ ।
ಚಲುವ ನಾದವನಲ್ಲಿ ವಿದ್ಯೆ ಪೇಳುವನಲ್ಲಿ ।
ಫಲದಲ್ಲಿ ಪ್ರತಿಕೂಲ ವಿಲ್ಲದ ಸ್ಥಳದಲ್ಲಿ ।
ಬೆಳೆದ ದರ್ಭೆಗಳಲ್ಲಿ ಅಗ್ನಿಯಲ್ಲಿ ಹರುವ ।
ಜಲದಲ್ಲಿ ಜಾಂಬುದ ನದಿಯಲ್ಲಿ ಶ್ಲೋಕದಲ್ಲಿ ।
ಬಲಿಮುಖ ಬಳಗದಲ್ಲಿ ಆಚಾರ ಶೀಲನಲ್ಲಿ
ಫಳಿಗೆ ಮಿಂಚಿನಲ್ಲಿ ಬಂಗಾರದಲ್ಲಿ ಇನಿತು ।
ಕಾಲಕಾಲಕ್ಕೆ ಬಿಡದೆ ಸ್ಮರಿಸು ಕಪಿಲ ಪರಮಾತ್ಮನ್ನ ।
ಗೆಲವುಂಟು ನಿನಗೆಲವೊ ಸಂಸಾರದಿಂದ ವೇಗ ।
ಕಲಿಯುಗದೊಳಗಿದೆ ಕೊಂಡಾಡಿದವರಿಗೆ ।
ಖಳರ ಅಂಜಿಕೆಯಿಲ್ಲ ನಿಂದಲ್ಲೆ ಶುಭಯೋಗ ।
ಬಲ ವೈರಿ ನುತ ನಮ್ಮ ವಿಜಯ ವಿಠ್ಠಲರೇಯಾ ।
ಇಳೆಯೊಳಗೆ ಕಪಿಲಾವತಾರನಾಗಿ ನಮ್ಮ ಭಾರ ವೊಹಿಸಿದ ॥ 5 ॥

॥ ಜತೆ ॥

ತಮ ಪರಿಚ್ಛೇದ ಈತನ ಸ್ಮರಣೆ ನೋಡು ಹೃ - ।
ತ್ಕಮಲದೊಳಗೆ ವಿಜಯ ವಿಠ್ಠಲನ್ನ ಚರಣಾಬ್ಜಾ ॥ 6 ॥
॥ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥